**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ.**

**ಸಿ.ಸಿ. ಸಂಖ್ಯೆ:- 589/2024**

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | **ಶಂಕರ** | ಸಿ.ಡಬ್ಲೂ-3 | ಪಿ.ಡಬ್ಲೂ-3 |
| ತಂದೆ/ಗಂಡನ ಹೆಸರು | **ಬುಗ್ಯಾ ನಾಯಕ** | | |
| ವಯಸ್ಸು | 47 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಜಾಕನಪಲ್ಲಿ ತಾಂಡ, ತಾಃ ಸೇಡಂ | | |

**ದಿನಾಂಕ 06-01-2025.**
**ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ಚಾಸಾ-1 ನನಗೆ ಗೊತ್ತು. ಚಾಸಾ-2 ನನ್ನ ಚಿಕ್ಕಮ್ಮ. ಚಾಸಾ-4 ನನ್ನ ಹೆಂಡತಿ. ಚಾಸಾ-5 ರಿಂದ 9 ರವರು ನಮ್ಮ ತಾಂಡದವರು. ಆರೋಪಿ ಮತ್ತು ಚಾಸಾ-1 ಸಹೋದರರು. ಅವರ ನಡುವೆ ಆದ ಗಲಾಟೆ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅವರ ನಡುವಿನ ಗಲಾಟೆ ಬಿಡಿಸಿಲ್ಲ. ನಾನು ಪೊಲಿಸರಿಗೆ ಈ ಸಂಬಂಧ ಯಾವುದೇ ಹೇಳಿಕೆ ನೀಡಿಲ್ಲ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**(ಈ ಹಂತದರಲ್ಲಿ ಸ.ಸ.ಅ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟಿ ಸವಾಲಿಗೆ ಅನುಮತಿಸಲಾಯಿತು)**

**ವಾಟಿ ಸವಾಲು :- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ದಿಃ 23-05-2021 ರಂದು ಈಗ ಓದಿ ಹೇಳಿದಂತೆ ನಾನು ಮೇಲ್ಕಂಡ ಹೆಸರು ಮತ್ತು ವಿಳಾಸದ ನಿವಾಸಿತನಿದ್ದು - - - - - ನಮ್ಮ ತಾಂಡಕ್ಕೆ ಬಂದಿದ್ದು ಇರುತ್ತದೆ ಎಂದು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ-1 ಎಂದು ಗುರುತಿಸಲಾಯಿತು.

ದಿಃ 21-05-2021 ರಂದು ಚಾಸಾ-1 ರವರು ಆತನ ಹೊಲದದಿಂದ ಮನ ಕಡೆ ಬರುತ್ತಿರುವಾಗ ಎದುರಿಗೆ ಬಂದ ಆರೋಪಿಗಳು ತಡೆದು ನಿಲ್ಲಿಸಿ ಎ ಖಾಜಾ ಸುಳೆ ಮಗನೇ ನಮ್ಮ ತಂದೆ ಜೊತೆ ಜಗಳ ಮಾಡಿ ಹಣ ತೆಗೆದುಕೊಂಡಿದ್ದಿಯಾ ನಿನ್ನನ್ನು ಬಿಡುವುದಿಲ್ಲ ಎಂದು ಹೇಳಿದರು, ಆಗ 3ನೇ ಆರೋಪಿ ತಾಂಡದ ಜನರ ಮುಂದೆ ನಮ್ಮ ಮರ್ಯಾದೆ ಹಾಳು ಮಾಡುತ್ತಿದ್ದಿಯಾ ಎಂದ ಹೇಳಿ ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯಿಂದ ಚಾಸಾ-1 ರವರ ಎಡಗೈಗೆ, ಮೊಳಕಾಲಿಗೆ ಮತ್ತು ಮೈಗೆ ಹೊಡೆದ ಎಂದರೆ ಸರಿಯಲ್ಲ. ಆಗ ನಾನಾ ಚಾಸಾ-2, 4 ಹಾಗೂ 5 ರವರು ಹೋಗಿ ಗಲಾಟೆ ಬಿಡಿಸಿದೆವು ಎಂದರೆ ಸರಿಯಲ್ಲ. ಎಲ್ಲಾ ಸಂಗತಿಗಳು ಗೊತ್ತಿದ್ದರು ಆರೋಪಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಫ್.ಸಿ, ಸೇಡಂ.**

**CC 589/2024**
**PW-1**
ದಿನಾಂಕ **06-01-2025.**
**ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ :- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯನ್ನು ತೋರಿಸಲಾಗಿ ಸಾಕ್ಷಿ ಸದರಿ ಕಟ್ಟಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**<u>ಪಾಟಿ ಸವಾಲು :- ಶ್ರೀ. NR ವಕೀಲರಿಂದಃ-</u>**

ನಮ್ಮ ಜಾನಾಂಗದಲ್ಲಿ ಮನೆಯಲ್ಲಿ ಯಾರಾದರು ತೀರಿಹೋದರೆ ಆ ಮನೆಯವರು ಖರ್ಚು ಮಾಡುವುದಿಲ್ಲ ಬೇರೆಯವರು ಖರ್ಚು ಮಾಡುತ್ತಾರೆ ಎಂದರೆ ಸರಿ. ನಂತರ ತೀರಿಹೋದ ಮನೆಯವರು ಖರ್ಚು ಮಾಡಿದವರೆ ಲೆಕ್ಕ ಮಾಡಿ ಹಣ ವಾಪಸ್ಸು ಕೊಡುತ್ತಾರೆ ಎಂದರೆ ಸರಿ. ಲಕ್ಷ್ಮಿಬಾಯಿ ತೀರಿಹೋದಾಗ 3ನೇ ಆರೋಪಿ ಖರ್ಚು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಹಣ ವಾಪಸ್ಸು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಗಲಾಟೆ ಯಾವ ಕಾರಣಕ್ಕೆ ಆಗಿದೆ ನನಗೆ ಗೊತಿಲ್ಲ. ಲಕ್ಷ್ಮಿಬಾಯಿ ತೀರಿಹೋದ ಎಷ್ಟು ದಿನಕ್ಕೆ ಗಲಾಟೆ ಆಗಿದೆ ನನಗೆ ಗೊತ್ತಿಲ್ಲ. ಚಾಸಾ-1 ನನಗೆ ದಾಯಾದಿ ಆಗಬೇಕು ಎಂದರೆ ಸರಿ. ಚಾಸಾ-1 ನನ್ನ ದಾಯಾದಿ ಆಗಿರುವ ಕಾರಣ ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮ—1 ರಿಂದ ಆರೋಪಿಗಳು ಹಲ್ಲೆ ಮಾಡಿದದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಟ್ಟಿಗೆಯಿಂದ ಯಾರು ಹಲ್ಲೆ ಮಾಡಿದರು ನನಗೆ ಗೊತ್ತಿಲ್ಲ .

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಫ್.ಸಿ, ಸೇಡಂ.**